ಇವರುಗಳ ಮೇಲೆ ದಾವೆಗಳನ್ನು ಹೂಡಿರುತ್ತದದೆ ಅಲ್ಲದೇ ಶ್ರೀ ಅಣ್ಣೇಗೌಡ ಮತ್ತು ಶ್ರೀ ಬಿ.ಎನ್. ಜಗನ್ನಾಥ್ ಇವರ ಹೆಸರುಗಳಲ್ಲಿರುವ ಹಾಗೂ ಇವರ ಕುಟುಂಬದ ಸದಸ್ಯರ ಹೆಸರುಗಳಲ್ಲಿರುವ ಆಸ್ತಿಗಳನ್ನು ಅವರು ಪರಭಾರೆ ಮಾಡುವುದನ್ನು ನಿಷೇಧಿಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 103ರ ರೀತ್ಯಾ ಬ್ಯಾಂಕು ತೀರ್ಪು ಮುನ್ನ ಜಪ್ತು ಮಾಡಿರುತ್ತದೆ. (ಅಟ್ಯಾಚ್‌ಮೆಂಟ್ ಬಿಫೋರ್ ಜಡ್ಜ್‌ಮೆಂಟ್)

ಮೇಲ್ಕಂಡ ಹಣ ದುರುಪಯೋಗ ಕುರಿತಂತೆ ಪ್ರಕರಣವನ್ನು ಸಿ.ಓ.ಡಿ.ಗೆ ತನಿಖೆಗೆ ಒಪ್ಪಿಸಲಾಗಿದೆ. ಸಿ.ಓ.ಡಿ. ಅಧಿಕಾರಿಗಳು ತನಿಖೆಯನ್ನು ನಡೆಸುತ್ತಿದ್ದಾರೆ. ಇದಲ್ಲದೆ ಸಹಕಾರ ಸಂಘಗಳ ನಿಬಂಧಕರವರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 64ರ ಪ್ರಕಾರ ವಿಚಾರಣೆಗೆ ನಡೆಸಲು ಮತ್ತು ಈ ದುರುಪಯೋಗ ಪ್ರಕರಣಕ್ಕೆ ಸಂಬಂಧಪಟ್ಟವರ ಮೇಲೆ ಜವಾಬ್ದಾರಿ ನಿಗಧಿಗೊಳಿಸಲು ತನಿಖೆಯನ್ನುಆದೇಶಿಸಿ ತನಿಖಾಧಿಕಾರಿಗಳನ್ನು ನೇಮಿಸಿರುತ್ತಾರೆ. ತನಿಖೆಯು ವಿಚಾರಣಾ ಹಂತದಲ್ಲಿರುತ್ತದೆ.

ಚಿಕ್ಕಮಂಗಳೂರು ಜಿಲ್ಲಾ ಪರಿಷತ್ತಿನವರಿಂದ ಮೈಸೂರು ಲ್ಯಾಪ್ಸ್‌ಗಳನ್ನು ನಿಗದಿತ ಕಂಟ್ರಾಕ್ಟರ್ ನಿಂದ ಪಡೆಯಲು ಆದೇಶ

ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಸಭಾಧ್ಯಕ್ಷಣೆಯವರೆ, ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನವರು ಎಲ್ಲಾ ಮಂಡಲ ಪಂಚಾಯಿತಿ ಮೈಸೂರು ಲ್ಯಾಂಪ್ಸ್, ಬಲ್ಬ್ ಹಾಗೂ ಟ್ಯೂಬ್‌ಗಳನ್ನೇ ನಿಗದಿತ ಕಂಟ್ರಾಕ್ಟರ್ ಒಬ್ಬರಿಂದಲೇ ಪಡೆಯಬೇಕೆಂಬ ಆದೇಶ ಅರ್ಥವಾಗುತ್ತಿಲ್ಲ. ಕಾರಣ ಪ್ರತಿ ಹಳ್ಳಿಗಳಲ್ಲೂ ಬಲ್ಬ್ ಹಾಕಿದ ಒಂದೇ ತಿಂಗಳಲ್ಲಿ ಕೆಟ್ಟುಹೋಗುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿವೆ. ಒಳ್ಳೆಯ ಬಾಳಿಕೆ ಬರುವಂಥ ಬಲ್ಬುಗಳನ್ನು ಕೊಳ್ಳಲು ಜಿಲ್ಲಾಪರಿಷತ್ತು ಒಪ್ಪುವುದಿಲ್ಲ ಎನ್ನುತ್ತಾರೆ. ಆದ್ದರಿಂದ ಈ ಸಮಸ್ಯೆ ಪ್ರತಿ ನನ್ನ ತಾಲ್ಲೂಕಿನ ಹಳ್ಳಿಗಳಲ್ಲೂ ಇರುತ್ತದೆ. ಈ ಬಗ್ಗೆ ಕೂಡಲೇ ಸರಿಯಾದ ಕ್ರಮ ತೆಗೆದುಕೊಳ್ಳಬೇಕಾಗಿ ಆಗ್ರಹಪಡಿಸುತ್ತೇನೆ.

ಶ್ರೀ ಆರ್. ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ): ಮಾನ್ಯ ಸಭಾದ್ಯಕ್ಷಣೆಯವರೇ, ಮಾನ್ಯ ಸದಸ್ಯಣೆಯವರು ಸದನದಲ್ಲಿ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇನೆ.

ಹೆಣ್ಣೂರು-ಬಾಣಸವಾಡಿ ಬಿ.ಡಿ.ಎ. ಬಡಾವಣೆಗೆ ಕಪ್ಪು ಹಲಗೆಯ ಬಸ್ ಓಡಿಸಲು ಒತ್ತಾಯ

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ): ಮಾನ್ಯ ಸಭಾಧ್ಯಕ್ಷಣೆಯವರೇ, ನಗರ ಸಭೆಯ ವ್ಯಾಪ್ತಿಗೆ ಸೇರದ ಇತರ ಬಿ.ಡಿ.ಎ. ಬಡಾವಣೆಗಳಿಗೆ ನಗರ ಸಾರಿಗೆ ಕಪ್ಪು ಹಲಗೆಯ (ಬ್ಲಾಕ್ ಬೋರ್ಡ್) ಬಸ್ಸುಗಳನ್ನು (ಚಂದ್ರಾ ಬಡಾವಣೆ, ಗಿರಿನಗರ, ಪದ್ಮನಾಭನಗರ, ಕತ್ತರಿಗುಪ್ಪೆ, ಬಿ.ಟಿ.ಎಂ. ಬಡಾವಣೆ, ಕೋರಮಂಗಲ ಇತ್ಯಾದಿ) ಓಡಿಸುತ್ತಿರುವ ಹಾಗೆ ಹೆಣ್ಣೂರು-ಬಾಣಸವಾಡಿ (ಈಗ ಕಲ್ಯಾಣ ನಗರ) ಬಿ.ಡಿ.ಎ. ಬಡಾವಣೆಗೆ ನಗರ ಸಾರಿಗೆ ಕಪ್ಪು ಹಲಗೆ ಬಸ್ಸುಗಳನ್ನು ಓಡಿಸದೆ ಗ್ರಮಾಂತರ ಕೆಂಪು ಹಲಗೆ (ರೆಡ್ ಬೋರ್ಡ್) ಬಸ್ಸುಗಳನ್ನು ಓಡಿಸುತ್ತಿರುವುದರಿಂದ ಈ ಬಡಾವಣೆಯ ನಾಗರೀಕರಿಗೆ ಆಗಿರುವ ತಾರತಮ್ಯ ಮತ್ತು ಅನ್ಯಾಯದ

ಬಗ್ಗೆ ಸಾರಿಗೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ. ಮತ್ತು ತತ್‌ಕ್ಷಣದಿಂದ ನಗರ ಸಾರಿಗ ಕಪ್ಪುಹಲಗೆ ಬಸ್ಸುಗಳನ್ನು ಓಡಿಸಬೇಕೆಂದು ಹಾಗೂ ಈಗ ಓಡುತ್ತಿರುವ 302ಸಿ, 302ಎಫ್., ಬಸ್ಸುಗಳನ್ನು ಸಾಕಾದಷ್ಟು ಓಡುತ್ತಿಲ್ಲದಿರುವುದರಿಂದ ಬಡಾವಣೆಯ ನಿವಾಸಿಗಳಿಗೆ ತುಂಬಾ ತೊಂದರೆಯಾಗಿರುವುದರಿಂದ ಹೆಚ್ಚು ಬಸ್ಸುಗಳನ್ನು ಓಡಿಸಬೇಕೆಂದು ಕೋರುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು): ಮಾನ್ಯ ಸಭಾಧ್ಯಕ್ಷಣೆಯವರೇ, ಸಾರಿಗೆ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನಾನು ಕೊಡುತ್ತೇನೆ.

ಇದು ಬೆಂಗಳೂರು ನಗರ ಸಾರಿಗೆಯವರು ಓಡಿಸುತ್ತಿರುವ ನಗರ ಸಾರಿಗ ಬಸ್ಸುಗಳನ್ನು ಹೆಣ್ಣೂರು ಬಾಣಸವಾಡಿ ಬಡಾವಣೆಗೆ (ಕಲ್ಯಾಣ ನಗರ, ವಿಸ್ತರಿಸುವ ಕೋರಿಕೆಯಾಗಿದೆ. ಬೆಂಗಳೂರು ನಗರ ಸಾರಿಗೆಯ ಅನುಮೋದಿಸಿದ ಯೋಜನೆಯಂತೆ ನಗರ ಸಾರಿಗೆ (ಕಪ್ಪು ಹಲಗೆ ಬಸ್ಸುಗಳನ್ನು ನಗರ ಸಭೆ ಸರಹದ್ದಿನವರೆಗೆ ಓಡಿಸಲಾಗುತ್ತಿದೆ. ಚಂದ್ರ ಬಡಾವಣೆ, ಗಿರಿನಗರ, ಪದ್ಮನಾಭನಗರ, ಕತ್ರಿಗುಪ್ಪೆ, ಬಿ.ಟಿ.ಎಂ. ಲೇಔಟ್ ಮತ್ತು ಕೋರಮಂಗಲ ಬಡಾವಣೆಗಳು ನಗರ ಸಭೆ ವ್ಯಾಪ್ತಿಗೆ ಒಳಗೊಂಡಿರುವುದರಿಂದ ಈ ಬಡಾವಣೆಗಳಿಗೆ ನಗರ ಸಾರಿಗೆ (ಕಪ್ಪುಹಲಗೆ, ಬಸ್ಸುಗಳನ್ನು ಓಡಿಸಲಾಗುತ್ತಿದೆ, ಆದರೆ ಹೆಣ್ಣೂರು ಬಾಣಸವಾಡಿ ಬಡಾವಣೆಯನ್ನು ನಗರ ಸಭೆಯವರು ಇನ್ನು ತಮ್ಮ ವ್ಯಾಪ್ತಿಗೆ ಸೇರಿಸಿಕೊಂಡಿರುವುದಿಲ್ಲ. ಆದ್ದರಿಂದ ಬೆಂಗಳೂರು ನಗರ ಸಭೆಯವರು ಈ ಬಡಾವಣೆಯನ್ನು ತಮ್ಮ ವ್ಯಾಪ್ತಿಗೆ ಸೇರಿಸಿಕೊಳ್ಳುವ ತನಕ ನಗರ ಸಾರಿಗೆ ಬಸ್ಸುಗಳನ್ನು ಓಡಿಸಲು ಸಾಧ್ಯವಾಗುವುದಿಲ್ಲ. ಆದಾಗ್ಯೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೆಣ್ಣೂರು ಬಾಣಸವಾಡಿ ಬಡಾವಣೆಗೆ ಈ ಕೆಳಕಂಡ ಬಸ್ಸುಗಳನ್ನು ಓಡಿಸುತ್ತಿದೆ.

ಕ್ರ ಸಂ	ಮಾರ್ಗ ಸಂಖ್ಯೆ	ಎಲ್ಲಿಂದ	ಎಲ್ಲಿಗೆ	ಆಚರಣೆಯಲ್ಲಿರುವ ಏಕಮುಖ ಸುತ್ತುಗಳು
1	302 ಸಿ	ಕೃ.ರಾ. ಮಾರುಕಟ್ಟೆ	ಹೆಣ್ಣೂರು ಬಾಣಸವಾಡಿ ಬಡಾವಣೆ	29
2	302 ಎ	ಬೆಂಗಳೂರು ಬಸ್ ನಿಲ್ದಾಣ	ಬಾಬಾಸಾಹೇಬ್ ಪಾಳ್ಯ	26
3	252 ಬಿ	ಪೀಣ್ಯ 2ನೇ ಘಟ್ಟ	ಹೆಣ್ಣೂರು ಬಾಣಸವಾಡಿ ಬಡಾವಣೆ	11
4	302ಇ	ಕೃ.ರಾ.ಮಾರುಕಟ್ಟೆ (ಮಾರ್ಗ : ಕಮ್ಮನ ಹಳ್ಳಿ)	ಚಳ್ಳಕೆರೆ	5 15
5	302 ಎಫ್	ಬೆಂಗಳೂರು ಬಸ್ ನಿಲ್ದಾಣ	ಹೆಣ್ಣೂರು ಬಾಣಸವಾಡಿ ಬಡಾವಣೆ	16

ಮಾರ್ಗ ಸಂಖ್ಯೆ : 302ಸಿ ಮತ್ತು 302 ಎ.ತಲಾ ಒಂದೊಂದು ಅನುಸೂಚಿಗಳನ್ನು (ಷೆಡ್ಯೂಲ್ಡ್ ಕ್ರಮವಾಗಿ ದಿ: 23-3-92 ಹಾಗೂ 1-7-92ರಂದು ಹೆಚ್ಚಿಸಲಾಗಿದೆ. ಅಲ್ಲದೇ ದಿ: 6-5-1992ರಿಂದ ಮತ್ತೊಂದು ಹೊಸ ಅನುಸೂಚಿಗಳನ್ನು

(ಮಾರ್ಗ ಸಂಖ್ಯೆ : 302ಎಫ್ ಪ್ರಾರಂಭಿಸಲಾಗಿದೆ) ಹೆಣ್ಣೂರು ಬಾಣಸವಾಡಿ ಬಡಾವಣೆಯ ನಿವಾಸಿಗಳ ಸಾರಿಗೆ ಅಗತ್ಯಗಳನ್ನು ಗ್ರಾಮಾಂತರ (ಅರ್ಬನ್) ಸಾರಿಗೆಗಳಿಂದ ಪೂರೈಸಲಾಗುತ್ತಿದೆ. ಗ್ರಾಮಾಂತರ ಸಾರಿಗೆಗಳಲ್ಲಿ ನಗರ ಸಾರಿಗೆಗಿಂತ ದರವು 25 ಪೈಸೆಗಿಂತ ಹೆಚ್ಚಾಗಿರುತ್ತದೆ. ಈ ವ್ಯತ್ಯಾಸದ ಹೊರತು ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯಲ್ಲಿ ಬೇರೆ ಯಾವುದೇ ವ್ಯತ್ಯಾಸ ಇರುವುದಿಲ್ಲ. ನಗರ ಸಭೆಯವರು ಹೆಣ್ಣೂರು ಬಾಣಸವಾಡಿ ಬಡಾವಣೆಯನ್ನು ತಮ್ಮ ವ್ಯಾಪ್ತಿಗೆ ಸೇರಿಸಿಕೊಂಡಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಈ ಬಡಾವಣೆಗೆ ನಗರಸಾರಿಗೆ ಸೇವೆಯನ್ನು ವಿಸ್ತರಿಸಲಾಗುವುದು.

ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿದಾರರಿಗೆ ಸಕ್ರಮೀಕರಣಕ್ಕೆ ಅರ್ಜಿ ಸಲ್ಲಿಸಲು ಅವಕಾಶ

ಶ್ರೀ ಕೆ. ಕುಶಾಲ (ಸುಳ್ಯ) : ಮಾನ್ಯ ಸಭಾಧ್ಯಕ್ಷಿಣಿಯವರೇ, ಕರ್ನಾಟಕ ರಾಜ್ಯಾದ್ಯಂತ ಸಾವಿರಾರು ಬಡ ಭೂ ರಹಿತರು, ಕೃಷಿ ಕಾರ್ಮಿಕ ಬಗರ್‌ಹುಕುಂ ಸಾಗುವಳಿದಾರರಿಗೆ ಸಕ್ರಮೀಕರಣಕ್ಕೆ ಅರ್ಜಿ ಸಲ್ಲಿಸಲು ಕಾನೂನಿನ ಅವಕಾಶವನ್ನು ನೀಡುವುದರ ಬಗ್ಗೆ ನಾನು ಪ್ರಸ್ತಾಪಿಸಬಯಸುತ್ತೇನೆ.

ಕರ್ನಾಟಕ ರಾಜ್ಯದಲ್ಲಿ ಲಕ್ಷಾಂತರ ಬಡ ಭೂರಹಿತ ಕೃಷಿ ಕಾರ್ಮಿಕರು, ಅವಿದ್ಯಾವಂತರಾಗಿದ್ದು ಬಡವರಾಗಿದ್ದು ಸಕ್ರಮೀಕರಣಕ್ಕೆ ಅರ್ಜಿ ಸಲ್ಲಿಸದೆ ತುಂಬ ಅನ್ಯಾಯವಾಗಿರುವುದು. ಮತ್ತು ಹಿಂದೆ ಅಕ್ರಮ ಭೂಮಿ ಸಕ್ರಮೀಕರಣಕ್ಕೆ ಸರಕಾರ ಕಾನೂನು ಮಾಡುವಾಗ ಗೋಮಾಳ ಜಮೀನು ಮತ್ತು ಭೂ ನ್ಯಾಯ ಮಂಡಳಿಯಿಂದ ತೀರ್ಪಾದ ಲಗ್ತ ಅನಾಧೀನ ಸರಕಾರಿ ಜಮೀನನ್ನು ಅಕ್ರಮದಾರರಿಗೆ ಸಕ್ರಮೀಕರಿಸಲು ಅವಕಾಶ ಇರಲಿಲ್. ಕಾನೂನು ಆದನಂತರ ಸಕ್ರಮೀಕರಣಕ್ಕೆ ಅವಕಾಶ ನೀಡಲಾಗಿರುವುದರಿಂದ, ಅರ್ಜಿದಾರರಿಗೆ ಅರ್ಜಿ ಸಲ್ಲಿಸಲು ಅವಕಾಶವಿಲ್ಲದೆ ವಂಚಿತರಾಗಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮಿತ ಜಮೀನಾದ ಶಾನ, ಬಾಣೆ, ಸರಕಾರಿ ದೇವವಕಾನ, ಜಮ್ಮಾ ಭೂಮಿ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಫಿ ತೋಟ ಚಮೀನು ಚಿಕ್ಕ ಹಿಡುವಳಿದಾರರಿಗೆ ಹಾಗೂ ಇತರ ಜಿಲ್ಲೆಗಳಲ್ಲಿ ನೆಡು ಮಾವಿನ ತೋಪು, ಪುರಸಭೆ ವ್ಯಾಪ್ತಿಯಲ್ಲಿ ಏಳೂವರೆ ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಬರುವ ಅಕ್ರಮಿತ ಜಮೀನಿನ ಸಕ್ರಮೀಕರಣಕ್ಕೆ ಅವಕಾಶವಿರುವುದಿಲ್ಲ. ಈ ರಾಜ್ಯದ ಬಡ ಭೂರಹಿತ ಕೃಷಿ ಕಾರ್ಮಿಕರಿಗೆ ಇದರಿಂದ ತುಂಬಾ ಅನ್ಯಾವಾಗಿದ್ದು ಇವರ ಜೀವನ ಮರಣದ ಸಮಸ್ಯೆಯಾಗಿರುವುದರಿಂದ ಅರ್ಜಿ ಸಲ್ಲಿಸಲು ಮತ್ತಷ್ಟು ಕಾಲಾವಕಾಶ ನೀಡುವುದು ಇಲ್ಲವೇ ತಾಲ್ಲೂಕಿನಲ್ಲಿ ಈಗಾಗಲೇ ಅಕ್ರಮ ಭೂಮಿ ಸಕ್ರಮೀಕರಣ ಸಮಿತಿಯವರಿಗೆ ಬಡ ಜನತೆ ನಿಜವಾಗಿ ಅಕ್ರಮಣ ಜಮೀನು ಹೊಂದಿದ್ದು ನಿಜವಾಗಿದ್ದಲ್ಲಿ ಸ್ಥಳ ಪರಿಶೀಲನೆಯಿಂದ ಅರ್ಜಿ ಪಡೆದುಕೊಳ್ಳಲು ಅವಕಾಶ ಮತ್ತು ಅದಿಕಾರ ನೀಡುವಂತೆ ಮಾಡುವುದು. ನೆಡುತೋಪು, ಮಾವಿನ ತೋಪು, ಚಿಕ್ಕಕಾಫಿ ಹಿಡುವಳಿ, ಶಾನ, ಬಾಣೆ, ಕುಮ್ಕಿ, ದೇವರಕಾನ ಮುಂತಾದ ಭೂಮಿಯನ್ನು ಬಡಜನತೆಗೆ ಸಕ್ರಮೀಕರಿಸಲು ಕಾಯಿದೆ ತಿದ್ದುಪಡಿ ತಂದು ಎಷ್ಟೇ ಕಷ್ಟವಾದರೂ ಆದೇಶ ನೀಡಬೇಕಾಗಿ ಸರಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.